### ಛಾವಣಿ ನೀರು ಸಂಗ್ರಹ ವ್ಯವಸ್ಥೆಗೆ ಅಳವಡಿಸುವ ಮುನ್ನ...

- ಛಾವಣಿಯಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವುದನ್ನು ಮರೆಯದಿರಿ.
- ಪಕ್ಷಿಗಳ ಹಿಕ್ಕೆ ಬಿದ್ದು ಮೇಲ್ಭಾಗ ಗಲೀಜು ಆಗಿದ್ದರೆ ಸ್ವಚ್ಛಗೊಳಿಸಿ.
- ಮಾಳಿಗೆಯಲ್ಲಿ ವಿಷಯುಕ್ತ ಪದಾರ್ಥಗಳನ್ನು ಇಡಬೇಡಿ.
- ಮಳೆ ಬರುವ ಅಂದಾಜು ಸಮಯ ನೋಡಿಕೊಂಡು, ಒಂದು ವಾರ ಮೊದಲೇ ತಾರಸಿಯ ಕಸಕಡ್ಡಿ ತೆಗೆದು, ಸ್ವಚ್ಛಗೊಳಿಸಿ.
- ಮೊದಲ ಸಲ ಮಳೆ ಸುರಿದಾಗ, ಆ ನೀರನ್ನು ಸಂಗ್ರಹಿಸಬೇಡಿ. ಒಂದು ವೇಳೆ ಅಧಿಕ ಪ್ರಮಾಣದ ಮಳೆ ಬಂದರೆ ಸಾಕಷ್ಟು ನೀರನ್ನು ಹೊರಗೆ ಬಿಟ್ಟು ಆಮೇಲೆ ಸಂಗ್ರಹ ಟ್ಯಾಂಕಿಗೆ ಹೋಗುವಂತೆ ಮಾಡಿ
- ಮರಳು ಹಾಗೂ ಇದ್ದಿಲು ಶೋಧಕ ಘಟಕ ಅಳವಡಿಸಿದ್ದರೆ ಕನಿಷ್ಠ ಎರಡು ವರ್ಷಗಳಿಗೆ ಒಮ್ಮೆ ಅವುಗಳನ್ನು ಬದಲಾಯಿಸಿ.



ನೆಲಮಂಗಲ ಸಮೀಪದ ಮರಸರಹಳ್ಳಿ ರೈತ ಎನ್.ಆರ್. ಶೆಟ್ಟಿ ಅಳವಡಿಸಿಕೊಂಡ ಛಾವಣಿ ಮಳೆನೀರು ಸಂಗ್ರಹ ವ್ಯವಸ್ಥೆ



ಡಾ. ದೇವರಾಜ ರೆಡ್ಡಿ ಮಾರ್ಗದರ್ಶನದಲ್ಲಿ ಮತ್ತೆ ಜೀವ ಪಡೆದ ಬಾಳೇನಹಳ್ಳಿ ಗ್ರಾಮದ ತೋಟವೊಂದರ ಕೊಳವೆಬಾವಿ



ಆಂಧ್ರದ ಅರಕು ಕಣಿವೆಯ ಬುಡಕಟ್ಟು ಹಳ್ಳಿಯೊಂದರಲ್ಲಿ ಮಳೆ ನೀರು ಸಂಗ್ರಹಕ್ಕೆಂದು ಮಾಡಿಕೊಂಡ ಸರಳ ವ್ಯವಸ್ಥೆ!

ಕಡೆ ಹರಿದುಹೋಗುವುದಿಲ್ಲ. ಇದಕ್ಕಾಗಿ, ದೊಡ್ಡ ಪಿವಿಸಿ ಪೈಪ್ ಅನ್ನು ಅಡ್ಡವಾಗಿ ಕತ್ತರಿಸಿ ಸಿಮೆಂಟ್ ಶೀಟ್ ಅಥವಾ ಹೆಂಚಿನ ಕೊನೆಗೆ ಜೋಡಿಸಬೇಕು. ಮೇಲೆ ಬಿದ್ದ ನೀರು, ಈ ಪೈಪ್ ಮೂಲಕ ತೊಟ್ಟಿಗೆ ಸೇರುವಂತೆ ಮಾಡಬೇಕು. ಇಲ್ಲಿಯೂ ತೊಟ್ಟಿಯೊಳಗೆ ನೀರು ಹೋಗುವ ಮೊದಲು ಫಿಲ್ಟರ್ ಅಳವಡಿಸಿದರೆ ಶುದ್ಧತೆ ಕಾಪಾಡಿಕೊಳ್ಳಬಹುದು.

ಮೇಲಿನದು ಟ್ಯಾಂಕುಗಳನ್ನು ಹೊರಗೆ ಅಳವಡಿಸಿಕೊಂಡು ಮಾಡುವ ಮಳೆ ನೀರು ಸಂಗ್ರಹ ವಿಧಾನ. ಮನೆ ಕಟ್ಟುವಾಗಲೇ ನೆಲಮಟ್ಟದಿಂದ ಕೆಳಗೆ ಟ್ಯಾಂಕ್ ನಿರ್ಮಾಣ ಮಾಡಿಕೊಳ್ಳುವುದು ಇದೆ. ಮಳೆ ನೀರು ಸಂಗ್ರಹಕ್ಕೆ ಇದಂತೂ ಹೇಳಿ ಮಾಡಿಸಿದಂಥದು. ಎಷ್ಟು ದೊಡ್ಡ ಪ್ರಮಾಣದ ತೊಟ್ಟಿ ಇರುತ್ತದೋ, ಅಷ್ಟು ಪ್ರಮಾಣದ ನೀರು ಸಿಕ್ಕಂತೆ!

ತಾರಸಿ ಮೇಲೆ ಬೀಳುವ ಮಳೆ ನೀರು ಕೊಳವೆ ಮೂಲಕ ತಂದು, ಶೋಧಕ ಘಟಕಕ್ಕೆ ಬಿಡಬೇಕು. ಅಲ್ಲಿಂದ ಶುದ್ಧ ನೀರು ತೊಟ್ಟಿಯನ್ನು ಸೇರುವಂತೆ ಮಾಡಬೇಕು. ತಲಾ ಮೂರು ಅಡಿ ಉದ್ದ–ಅಗಲ ಹಾಗೂ ಆರು ಅಡಿ ಎತ್ತರದ ಸಿಮೆಂಟ್ ತೊಟ್ಟಿ ನಿರ್ಮಿಸಿ, ಅದರಲ್ಲಿ ಮರಳು ಹಾಗೂ ಇದ್ದಿಲು ತುಂಬಬೇಕು. ಇದರ ಮೂಲಕ ಹಾಯ್ದು ಹೋಗುವ ನೀರು ಶುದ್ಧವಾಗಿರುತ್ತದೆ. ಈಚಿನ ದಿನಗಳಲ್ಲಿ ಮಾರುಕಟ್ಟೆಯಲ್ಲಿ ಕಡಿಮೆ ದರದಲ್ಲಿ ಫಿಲ್ಟರ್ ಯೂನಿಟ್‌ಗಳು ಸಿಗುತ್ತಿವೆ. ಅವುಗಳನ್ನೂ ಅಳವಡಿಸಿಕೊಳ್ಳಬಹುದು. ಆಗಾಗ್ಗೆ ಶೋಧಕವನ್ನು ತೆಗೆದು ಸ್ವಚ್ಛಗೊಳಿಸುವುದು ಅಗತ್ಯ.

### ಅಂತರ್ಜಲವೆಂಬ ಬ್ಯಾಂಕ್!

ಈಗೀಗ ಮನೆಮನೆಗಳಲ್ಲೂ ಕೊಳವೆಬಾವಿ ಕೊರೆಸಿ, ನೀರು ಹೊರತೆಗೆಯುವುದು ಸಾಮಾನ್ಯವಾಗಿದೆ. ನೂರಾರು ವರ್ಷಗಳಿಂದ ನೆಲದ ಪದರುಗಳಲ್ಲಿ ಭದ್ರವಾಗಿ ಅಡಗಿಕೂತಿದ್ದ ಅಂತರ್ಜಲವನ್ನು ಯಾವುದೇ ಎಗ್ಗಿಲ್ಲದೆ ಹೊರತೆಗೆದು ಬಳಸಲಾಗುತ್ತಿದೆ. 'ಬ್ಯಾಂಕಿನ ಖಾತೆಯಲ್ಲಿ ಹಣ ಇದ್ದರೆ ಎಟಿಎಂ ಮೂಲಕ ಪಡೆಯಬಹುದು. ಖಾತೆಯಲ್ಲಿ ಕಾಸು ಇಲ್ಲದೇ ಹೋದರೆ ಎಟಿಎಂನಲ್ಲಿ ಏನು ಸಿಕ್ಕೀತು? ಅಂತರ್ಜಲದ ಕಥೆಯೂ ಇದೇ ಆಗಿದೆ' ಎಂದು ಕಳವಳ ವ್ಯಕ್ತಪಡಿಸುತ್ತಾರೆ ಚಿತ್ರದುರ್ಗದ ಜಲತಜ್ಞ ಡಾ. ಎನ್.ಜೆ. ದೇವರಾಜ ರೆಡ್ಡಿ.

ನೆಲಮಟ್ಟದಿಂದ ಆಳಕ್ಕೆ ಹೋದಂತೆಲ್ಲ ನೀರಿನ ಗುಣಮಟ್ಟ ಕಡಿಮೆಯಾಗುತ್ತ ಹೋಗುತ್ತದೆ. ಆಳದ ಕೊಳವೆಬಾವಿಗಳಿಂದ ಸಿಗುವುದು ರಾಸಾಯನಿಕಯುಕ್ತ ಅಪಾಯಕಾರಿ ನೀರು ಎನ್ನುವ ಅವರು, ಮಳೆ ನೀರನ್ನು ಹೆಚ್ಚೆಚ್ಚು ಬಳಸುವುದು ಯೋಗ್ಯ ಎನ್ನುತ್ತಾರೆ. 'ನೀರು ಬರುತ್ತಿದ್ದ ಕೊಳವೆಬಾವಿ ಬತ್ತಿ ಹೋದರೆ ಮಳೆನೀರು ಮರುಪೂರಣ ಮಾಡುವ ಮೂಲಕ ಅದನ್ನು ಪುನಶ್ಚೇತನಗೊಳಿಸಬಹುದು. ಇಂಥ ನೂರಾರು ಉದಾಹರಣೆಗಳು ಇವೆ' ಎನ್ನುವ ದೇವರಾಜ ರೆಡ್ಡಿ, ಕರ್ನಾಟಕ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದಲ್ಲಿ ಕೊಳವೆಬಾವಿಗಳಿಗೆ ಮತ್ತೆ ಜೀವಕೊಟ್ಟಿದ್ದಾರೆ. ಮಳೆನೀರು ಮರುಪೂರಣಕ್ಕೆ ಅವರು ಅನುಸರಿಸುವುದು ಸರಳ ವಿಧಾನ.

ಕೊಳವೆಬಾವಿ ಸುತ್ತಲೂ ತಲಾ ಮೂರು ಮೀಟರ್ ಉದ್ದ, ಅಗಲ ಹಾಗೂ ಆಳದ ಗುಂಡಿ ತೆಗೆಯಬೇಕು. ಕೊಳವೆಬಾವಿಯ ಪೈಪ್‌ಗೆ ಹಲವಾರು ಕಿರುರಂಧ್ರ ಕೊರೆಯಬೇಕು. ಈ ರಂಧ್ರಗಳಿಗೆ ಅಕ್ವಾ ಮೆಶ್ (ಸೂಕ್ಷ್ಮ ಜಾಲರಿ) ಸುತ್ತಬೇಕು. ಈಗ ಗುಂಡಿಯ ಕೆಳಭಾಗದಲ್ಲಿ ದೊಡ್ಡ ಗಾತ್ರದ ಕಲ್ಲುಗಳು, ಮಧ್ಯಭಾಗದಲ್ಲಿ ಸಣ್ಣ ಕಲ್ಲುಗಳು ಹಾಗೂ ಮೇಲ್ಭಾಗದಲ್ಲಿ ಒರಟು ಮರಳನ್ನು ಹಾಕಿ ನೆಲಮಟ್ಟಕ್ಕೆ ಮುಚ್ಚಬೇಕು. ಬೇರೆ ಕಡೆಯಿಂದ ಮಳೆನೀರು ಹರಿದುಬಂದು ಈ ಗುಂಡಿಯಲ್ಲಿ ಇಂಗುವಂತೆ ಮಾಡಬೇಕು.

"ಒಂದೆರಡು ಸಲ ಜೋರು ಮಳೆ ಬಂದರೆ ಕೊಳವೆಬಾವಿ ನಿಧಾನವಾಗಿ ಜೀವ ಪಡೆಯುತ್ತದೆ. ಮಳೆಗಾಲದುದ್ದಕ್ಕೂ ನೀರು ಇಲ್ಲಿ ಇಂಗಿದರೆ ಕೊಳವೆಬಾವಿ ಸಮರ್ಪಕ ಪ್ರಮಾಣದ ನೀರು ಒದಗಿಸುತ್ತದೆ. ಮೊದಲು ನೀರು ಕೊಟ್ಟು, ಆಮೇಲೆ ಬತ್ತಿಹೋದ ಕೊಳವೆಬಾವಿಗೆ ಈ ವಿಧಾನ ಪರಿಣಾಮಕಾರಿ" ಎಂದು ದೇವರಾಜ ರೆಡ್ಡಿ ವಿವರಿಸುತ್ತಾರೆ. ನೂರಾರು ತೋಟಗಳು, ಮನೆಗಳು, ಆಶ್ರಮ–ಮಠಗಳ ಬೋರ್‌ವೆಲ್‌ಗೆ ಈ ತೆರನಾದ ಪದ್ಧತಿ ಅಳವಡಿಸಿ ಅವರು ಯಶಸ್ವಿಯಾಗಿದ್ದಾರೆ (ಮೊ: 9448125498).

ಓಡುವ ಮಳೆನೀರನ್ನು ನಡೆಯುವಂತೆ ಮಾಡಿ, ನಿಲ್ಲಿಸಿ ಆ ಬಳಿಕ ಇಂಗುವಂತೆ ಮಾಡಿದರೆ ಅಂತರ್ಜಲ ಹೆಚ್ಚುತ್ತದೆ. ಇದರ ಹೊರತಾಗಿಯೂ ಮನೆ ಮೇಲೆ ಬೀಳುವ ಮಳೆನೀರನ್ನು ನಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಹಿಡಿದಿಟ್ಟುಕೊಳ್ಳಬಹುದು. ಮೊದಲನೆಯದು ದೀರ್ಘಕಾಲೀನ ಪರಿಹಾರವಾದರೆ, ಎರಡನೆಯದು ತಾತ್ಕಾಲಿಕ. ಎರಡನ್ನೂ ಜೊತೆಜೊತೆಯಾಗಿ ಅನುಸರಿಸಿದರೆ ನೀರನೆಮ್ಮದಿ ಸಿಗುವುದು ಕಷ್ಟವೇನಲ್ಲ. ■